# All India Radio: Bangalore
# National Bulletin In Kannada
# 03.04.2025 19.35 p.m.
## ಆಕಾಶವಾಣಿ, ಬೆಂಗಳೂರು
## ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ರಾಜ್ಯ ಸಭೆಯಲ್ಲೂ ವಕ್ಫ್ ತಿದ್ದುಪಡಿ ವಿಧೇಯಕ ಮಂಡನೆ; ಮುಂದುವರಿದ ಚರ್ಚೆ

೨. ೬ನೇ ಬಿಮ್‌ಸ್ಟೆಕ್ ಶೃಂಗಸಭೆ; ಭಾರತ ಮತ್ತು ಥೈಲ್ಯಾಂಡ್ ನಡುವೆ ೬ ಮಹತ್ವದ ಒಪ್ಪಂದಗಳಿಗೆ ಸಹಿ

೩. ಅಮೇರಿಕ ವಿಧಿಸಿರುವ ಸುಂಕದ ಬಗ್ಗೆ ಭಾರತದ ಎಚ್ಚರಿಕೆಯ ಹೆಜ್ಜೆ; ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಸ್ಪಷ್ಟನೆ

೪. ಆಹಾರದ ಗುಣಮಟ್ಟ ಪರಿಶೀಲನೆಗೆ ದೇಶದಲ್ಲಿ ೧೦೦ ಪರೀಕ್ಷಾ ಪ್ರಯೋಗಾಲಯ ಸ್ಥಾಪನೆಗೆ ಕೇಂದ್ರ ಸರ್ಕಾರ ನಿರ್ಧಾರ

೫. ಐಪಿಎಲ್ ಟಿ -೨೦ ಕ್ರಿಕೆಟ್; ಕೊಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಟಾಸ್ ಗೆದ್ದ ಸನ್ ರೈಸರ್ಸ್ ಹೈದರಾಬಾದ್ ಫೀಲ್ಡಿಂಗ್ ಆಯ್ಕೆ

****************

ಲೋಕಸಭೆಯು ವಕ್ಫ್ ತಿದ್ದುಪಡಿ ಮಸೂದೆ, ೨೦೨೫ನ್ನು ಅಂಗೀಕರಿಸಿದ ನಂತರ ಮಸೂದೆಯ ಕುರಿತು ರಾಜ್ಯಸಭೆಯಲ್ಲಿ ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಮಸೂದೆಯನ್ನು ಮಂಡಿಸಿದರು. ಬಳಿಕ ಮಾತನಾಡಿದ ಅವರು, ಪಾಲುದಾರರೊಂದಿಗೆ ಮತ್ತು ಜಂಟಿ ಸಂಸದೀಯ ಸಮಿತಿಯಲ್ಲಿ ವಿವರವಾದ ಸಮಾಲೋಚನೆಯ ನಂತರ ಮಸೂದೆಯನ್ನು ಜಾರಿಗೊಳಿಸಲಾಗಿದೆ ಎಂದರು.

ವಿರೋಧ ಪಕ್ಷಗಳು ಈ ಮಸೂದೆಯನ್ನು ಬೆಂಬಲಿಸುವಂತೆ ಒತ್ತಾಯಿಸಿದ ಅವರು ಪ್ರತಿಪಕ್ಷಗಳ ಆರೋಪಗಳನ್ನು ತಿರಸ್ಕರಿಸಿದರು. ವಕ್ಫ್‌ನ ಪ್ರಯೋಜನವನ್ನು ಮುಸ್ಲಿಮರು ಮಾತ್ರ ಪಡೆಯಬಹುದು ಯಾವುದೇ ಮುಸ್ಲಿಮೇತರರು ವಕ್ಫ್ ಆಸ್ತಿಗಳ ನಿರ್ವಹಣೆಯಲ್ಲಿ ಹಸ್ತಕ್ಷೇಪ ಮಾಡುತ್ತಾರೆ ಎಂಬುದು ಸರಿಯಲ್ಲ ಎಂದು ಹೇಳಿದರು.

ವಕ್ಫ್ ಆಸ್ತಿಗಳ ಉತ್ತಮ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಮುಸ್ಲಿಮರ ಧಾರ್ಮಿಕ ಆಚರಣೆಯಲ್ಲಿ ಹಸ್ತಕ್ಷೇಪ ಮಾಡದಿರಲು ಈ ಮಸೂದೆಯಲ್ಲಿ ಉದ್ದೇಶಿಸಲಾಗಿದೆ. ವಕ್ಫ್ ಮಂಡಳಿಗಳು ಮುಸ್ಲಿಂಮರ ಎಲ್ಲಾ ವಿಭಿನ್ನ ಪಂಗಡಗಳು ಮತ್ತು ಮಹಿಳೆಯರಿಗೆ ಪ್ರಾತಿನಿಧ್ಯವನ್ನು ಹೊಂದಿರುತ್ತವೆ ಎಂದು ಈ ವೇಳೆ ಸಚಿವರು ಹೇಳಿದರು.

ಧ್ವನಿ; ಕಿರಣ್ ರಿಜಿಜು

ಲೋಕಸಭೆಯಲ್ಲಿ ಸುಮಾರು ೧೨ ಗಂಟೆಗಳ ಚರ್ಚೆಯ ಬಳಿಕ ಇಂದು ಬೆಳಗಿನ ಜಾವ ಮಸೂದೆಗೆ ಅಂಗೀಕಾರ ದೊರೆತಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ವಕ್ಫ್ ತಿದ್ದುಪಡಿ ಮಸೂದೆ ಮಂಡನೆ ಮಾಡಿದ್ದು ಸಂತಸ ತಂದಿದೆ ಎಂದು ಗದಗ ಜಿಲ್ಲಾ ಯುವ ಕಾರ್ಯಕರ್ತ ಶಿವರಾಜಗೌಡ ಹಿರೇಮನಿಪಾಟೀಲ್ ಅಭಿಪ್ರಾಯ ಪಟ್ಟಿದ್ದಾರೆ.

ಧ್ವನಿ: ಶಿವರಾಜಗೌಡ ಹಿರೇಮನಿಪಾಟೀಲ್

****************

ಇನ್ನು ಪ್ರತಿಪಕ್ಷಗಳು ವಕ್ಫ್ ತಿದ್ದುಪಡಿ ಮಸೂದೆಗೆ ವಿರೋಧ ವ್ಯಕ್ತಪಡಿಸಿದ್ದು, ರಾಜ್ಯಸಭೆಯ ಚರ್ಚೆಯಲ್ಲಿ ಭಾಗವಹಿಸಿದ ಡಾ. ಸೈಯದ್ ನಾಸೀರ್ ಹುಸೇನ್, ಈ ಮಸೂದೆಯನ್ನು ಕೋಮು ಧ್ರುವೀಕರಣದ ಉದ್ದೇಶದಿಂದ ತರಲಾಗಿದ್ದು, ಬಿಜೆಪಿ ಸಮುದಾಯಗಳನ್ನು ವಿಭಜಿಸಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದರು.

ಡಾ. ಹುಸೇನ್ ಮಾತಿಗೆ ಅಡ್ಡಿಪಡಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ವಿರೋಧ ಪಕ್ಷಗಳು ಜನರನ್ನು ದಾರಿ ತಪ್ಪಿಸಲು ಪ್ರಯತ್ನಿಸುತ್ತಿವೆ ಎಂದು ಹೇಳಿದರು.

ಮಸೂದೆ ಜಾತ್ಯತೀತ ವಿರೋಧಿ ಮತ್ತು ಸಂವಿಧಾನಬಾಹಿರವಾಗಿದೆ ಎಂದು ಆರೋಪಿಸಿ ಡಿಎಂಕೆಯ ತಿರುಚಿ ಶಿವ ಮಸೂದೆಯನ್ನು ವಿರೋಧಿಸಿದರು.

ಆಮ್ ಆದ್ಮಿ ಪಕ್ಷದ ಸಂಜಯ್ ಸಿಂಗ್ ಈ ಮಸೂದೆಯನ್ನು ಸಂವಿಧಾನಬಾಹಿರ ಎಂದು ಕರೆದಿದ್ದು ಸರ್ಕಾರ ಅದನ್ನು ಹಿಂದಕ್ಕೆ ಪಡೆಯಬೇಕೆಂದು ಒತ್ತಾಯಿಸಿದರು.

****************

ಥೈಲ್ಯಾಂಡ್‌ನಲ್ಲಿ ನಡೆಯುತ್ತಿರುವ ೬ನೇ ಬಿಮ್‌ಸ್ಟೆಕ್ ಶೃಂಗಸಭೆಯಲ್ಲಿ ಇಂದು ವಿವಿಧ ಕ್ಷೇತ್ರಗಳ ಸಹಕಾರಕ್ಕಾಗಿ ಭಾರತ ಮತ್ತು ಥೈಲ್ಯಾಂಡ್ ನಡುವೆ ಆರು ಮಹತ್ವದ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಐಟಿ, ಕಡಲು, ಸಣ್ಣ ಮಧ್ಯಮ ಮತ್ತು ಸೂಕ್ಷ್ಮ ಕೈಗಾರಿಕೆಗಳು, ಕರಕುಶಲ ಮತ್ತು ಕೈಮಗ್ಗ ವಲಯಗಳು ಸೇರಿದಂತೆ ೬ ಒಪ್ಪಂದಗಳನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಥೈಲ್ಯಾಂಡ್ ಪ್ರಧಾನಿ ಪೇಟೊಂಗ್‌ಟಾರ್ನ್ ಶಿನವಾತ್ರ ನಡುವಿನ ದ್ವಿಪಕ್ಷೀಯ ಮಾತುಕತೆಗಳ ನಂತರ ವಿನಿಮಯ ಮಾಡಿಕೊಳ್ಳಲಾಯಿತು.

ದ್ವಿಪಕ್ಷೀಯ ಸಂಬಂಧಗಳ ಪ್ರಗತಿ ಪರಿಶೀಲನೆಯ ನಂತರ ಭಾರತ-ಥೈಲ್ಯಾಂಡ್ ದ್ವಿಪಕ್ಷೀಯ ಪಾಲುದಾರಿಕೆಗೆ ಹೆಚ್ಚಿನ ವೇಗವನ್ನು ನೀಡುವ ಮಾರ್ಗಗಳನ್ನು ಚರ್ಚಿಸಲಾಯಿತು.

ನಂತರ ತಮ್ಮ ಜಂಟಿ ಹೇಳಿಕೆಯಲ್ಲಿ, ಪ್ರಧಾನಿ ಮೋದಿ ಅವರು ಭಾರತ-ಥೈಲ್ಯಾಂಡ್ ಸಂಬಂಧವನ್ನು ಕಾರ್ಯತಂತ್ರದ ಪಾಲುದಾರಿ ನಿರ್ಧಾರವನ್ನು ಘೋಷಿಸಿದರು. ಭಾರತದ 'ಆಕ್ಟ್ ಈಸ್ಟ್' ನೀತಿ ಮತ್ತು ಇಂಡೋ-ಪೆಸಿಫಿಕ್ ದೃಷ್ಟಿಕೋನದಲ್ಲಿ ಥೈಲ್ಯಾಂಡ್ ವಿಶೇಷ ಸ್ಥಾನವನ್ನು ಹೊಂದಿದೆ ಎಂದು ಈ ಸಂದರ್ಭದಲ್ಲಿ ಹೇಳಿದರು.

ಇದೇ ವೇಳೆ ಭಾರತ ಮತ್ತು ಥೈಲ್ಯಾಂಡ್ ನಡುವಿನ ಶತಮಾನಗಳಷ್ಟು ಹಳೆಯ ಸಂಬಂಧಗಳನ್ನು ಪ್ರಧಾನಿ ವಿವರಿಸಿದರು. ಜೊತೆಗೆ ಇತ್ತೀಚಿನ ಭೂಕಂಪದಲ್ಲಿ ಸಂಭವಿಸಿದ ಜೀವಹಾನಿಗೆ ಭಾರತದ ಜನರ ಪರವಾಗಿ ಸಂತಾಪ ಸೂಚಿಸಿ, ಗಾಯಾಳುಗಳ ಶೀಘ್ರ ಚೇತರಿಕೆಗೆ ಹಾರೈಸಿದರು.

ಇದೇ ವೇಳೆ ಥಾಯ್ಲ್ಯಾಂಡ್ ಪ್ರಧಾನಿ ,ಪ್ರಧಾನಿ ಮೋದಿಯವರಿಗೆ ವಿಶ್ವ ತಿ-ಪಿಟಕ: ಸಜ್ಜಾಯ ಫೋನೆಟಿಕ್ ಆವೃತ್ತಿ ಎಂಬ ಪವಿತ್ರ ಗ್ರಂಥಗಳನ್ನು ಉಡುಗೊರೆ ನೀಡಿದರು,

ಇನ್ನು ನಾಳೆ “ಬಿಮ್‌ಸ್ಟೆಕ್ - ಸಮೃದ್ಧ, ಸ್ಥಿತಿಸ್ಥಾಪಕ ಮತ್ತು ಮುಕ್ತ" ಧ್ಯೇಯದೊಂದಿಗೆ ನಡೆಯಲಿರುವ ೬ ನೇ ಬಿಮ್‌ಸ್ಟೆಕ್ ಶೃಂಗಸಭೆಯಲ್ಲಿ ಬ್ಯಾಂಕಾಕ್ ವಿಷನ್ ೨೦೩೦ ಅನ್ನು ಅಂಗೀಕರಿಸಲಿದೆ.

ಬಿಮ್‌ಸ್ಟೆಕ್ ಶೃಂಗಸಭೆಯ ನಂತರ ಪ್ರಧಾನಿ ನರೇಂದ್ರ ಮೋದಿಯವರು ಶ್ರೀಲಂಕಾ ಅಧ್ಯಕ್ಷ ಅನುರ ಕುಮಾರ ದಿಸನಾಯಕೆ ಆಹ್ವಾನದ ಮೇರೆಗೆ ಮೂರು ದಿನಗಳ ರಾಜ್ಯ ಭೇಟಿಗಾಗಿ ಶ್ರೀಲಂಕಾ ತೆರಳಲಿದ್ದಾರೆ.

****************

ಅಮೇರಿಕಾ ವಿಧಿಸಿರುವ ೨೬ ಪ್ರತಿಶತ ಪರಸ್ಪರ ಸುಂಕಗಳ ಪರಿಣಾಮಗಳನ್ನು ಭಾರತ ಎಚ್ಚರಿಕೆಯಿಂದ ಪರಿಶೀಲಿಸುತ್ತಿದೆ . ಭಾರತದ ಕೈಗಾರಿಕೆ ಮತ್ತು ರಫ್ತುದಾರರು ಸೇರಿದಂತೆ ಎಲ್ಲಾ ಪಾಲುದಾರರೊಂದಿಗೆ ಇಲಾಖೆ ತೊಡಗಿಸಿಕೊಂಡಿದ್ದು, ಸುಂಕಗಳ ಮೌಲ್ಯಮಾಪನದ ಬಗ್ಗೆ ಪ್ರತಿಕ್ರಿಯೆ ಪಡೆಯುತ್ತಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಅಮೇರಿಕಾ ವ್ಯಾಪಾರ ನೀತಿಯಲ್ಲಿನ ಈ ಹೊಸ ಬೆಳವಣಿಗೆಯಿಂದ ಉಂಟಾಗಬಹುದಾದ ಅವಕಾಶಗಳನ್ನು ಇಲಾಖೆ ಅಧ್ಯಯನ ಮಾಡುತ್ತಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಲ್ಲಾ ವ್ಯಾಪಾರ ಪಾಲುದಾರರಿಂದ ಆಮದುಗಳ ಮೇಲೆ ೧೦ ರಿಂದ ೫೦ ಪ್ರತಿಶತದವರೆಗೆ ಹೆಚ್ಚುವರಿ ಮೌಲ್ಯಯುತ ಸುಂಕಗಳನ್ನು ವಿಧಿಸುವ ಪರಸ್ಪರ ಸುಂಕಗಳ ಕುರಿತು ಕಾರ್ಯಕಾರಿ ಆದೇಶವನ್ನು ಹೊರಡಿಸಿದ್ದಾರೆ. ೧೦ ಪ್ರತಿಶತದಷ್ಟು ಮೂಲ ಸುಂಕವು ಏಪ್ರಿಲ್ ೫ ರಿಂದ ಜಾರಿಗೆ ಬರಲಿದೆ ಮತ್ತು ಉಳಿದ ನಿರ್ದಿಷ್ಟ ಹೆಚ್ಚುವರಿ ಮೌಲ್ಯಯುತ ಸುಂಕವು ಏಪ್ರಿಲ್ ೯ ರಿಂದ ಜಾರಿಗೆ ಬರಲಿದೆ. ಆದೇಶದ ಪ್ರಕಾರ ಭಾರತದ ಮೇಲೆ ಹೆಚ್ಚುವರಿ ಸುಂಕವು ಶೇಕಡಾ ೨೭ ಆಗಿದೆ.

****************

ಆಹಾರದ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಸರ್ಕಾರವೂ ಶೀಘ್ರವೇ ದೇಶದಲ್ಲಿ ೧೦೦ ಆಹಾರ ಪರೀಕ್ಷಾ ಪ್ರಯೋಗಾಲಯಗಳನ್ನು ನಿರ್ಮಿಸಲಿದೆ ಎಂದು ಕೇಂದ್ರ ಆಹಾರ ಸಂಸ್ಕರಣಾ ಸಚಿವ ಚಿರಾಗ್ ಪಾಸ್ವಾನ್ ಹೇಳಿದ್ದಾರೆ.

ಲೋಕಸಭೆಯಲ್ಲಿ ಪ್ರಶ್ನೆಗಳಿಗೆ ಪೂರಕ ಉತ್ತರ ನೀಡಿದ ಅವರು, ಸರ್ಕಾರವು ಆಹಾರ ಗುಣಮಟ್ಟದ ಬಗ್ಗೆ ರಾಜಿ ಮಾಡಿಕೊಳ್ಳುವುದಿಲ್ಲ, ದೇಶದಾದ್ಯಂತ ೨೦೫ ಆಹಾರ ಪರೀಕ್ಷಾ ಪ್ರಯೋಗಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳನ್ನು ೫೦೩ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದೆ ಎಂದರು.

ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು ಕಳೆದ ಎರಡು ವರ್ಷಗಳಲ್ಲಿ ಮೂರು ಲಕ್ಷಕ್ಕೂ ಅಧಿಕ ಮಾದರಿಗಳನ್ನು ವಿಶ್ಲೇಷಿಸಿದ್ದು, ೧೩ ಸಾವಿರ ಮಾದರಿಗಳು ಅಸುರಕ್ಷಿತವೆಂದು ಕಂಡುಬಂದಿದೆ. ಎರಡು ಸಾವಿರಕ್ಕೂ ಹೆಚ್ಚು ಜನರ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗಿದೆ ಮತ್ತು ಎಫ್‌ಎಸ್‌ಎಸ್‌ಎಐ ತನ್ನ ಪ್ರಾದೇಶಿಕ ಕಚೇರಿಗಳು ಮತ್ತು ರಾಜ್ಯ ಆಹಾರ ಸುರಕ್ಷತಾ ಇಲಾಖೆಗಳ ಮೂಲಕ ಆಹಾರ ಉತ್ಪನ್ನಗಳ ಮೇಲೆ ನಿಯಮಿತ ಕಣ್ಗಾವಲು, ಮೇಲ್ವಿಚಾರಣೆ, ತಪಾಸಣೆ ಮತ್ತು ಮಾದರಿ ಸಂಗ್ರಹಣೆ ಮಾಡಲಾಗುತ್ತದೆ ಎಂದು ಸಚಿವರು ಮಾಹಿತಿ ನೀಡಿದರು.

****************

ರಕ್ಷಣಾ ಸಚಿವ ರಾಜ್ ನಾಥ್ ಸಿಂಗ್ ಇಂದು ಮೌಂಟ್ ಎವರೆಸ್ಟ್ ಮತ್ತು ಮೌಂಟ್ ಕಾಂಚನ್ ಜುಂಗಾ ಪರ್ವತಾಯಾತ್ರೆಗೆ ನವದೆಹಲಿಯ ಸೌತ್ ಬ್ಲಾಕ್ ನಿಂದ ಚಾಲನೆ ನೀಡಿದರು. ನಂತರ ಪರ್ವತಾರೋಹಿಗಳೊಂದಿಗೆ ಸಂವಹನ ನಡೆಸಿದ ಅವರು ಪರ್ವತಾರೋಹಿಗಳ ಧೈರ್ಯ, ಸಮರ್ಪಣೆ, ದೃಢಸಂಕಲ್ಪವನ್ನು ಶ್ಲಾಘಿಸಿದರು.

೩೪ ಪರ್ವತಾರೋಹಿಗಳನ್ನು ಒಳಗೊಂಡ ಭಾರತೀಯ ಸೇನೆಯ ಮೌಂಟ್ ಎವರೆಸ್ಟ್ ಯಾತ್ರೆಯ ನೇತೃತ್ವವನ್ನು ಲೆಫ್ಟಿನೆಂಟ್ ಕರ್ನಲ್ ಮನೋಜ್ ಜೋಶಿ ವಹಿಸಲಿದ್ದಾರೆ. ಮತ್ತು  ಕಾಂಚನ್ ಜುಂಗಾ ಪರ್ವತವನ್ನು ಭಾರತೀಯ ಸೇನೆಯ ಕರ್ನಲ್ ಸರ್ಫರಾಜ್ ಸಿಂಗ್ ನೇತೃತ್ವದಲ್ಲಿ ಇಂಡೋ - ನೇಪಾಳ ಜಂಟಿಯಾಗಿ, ಭಾರತೀಯ ಸೇನೆಯ ೧೨ ಪರ್ವತಾರೋಹಿಗಳು ಮತ್ತು ನೇಪಾಳ ಸೇನೆಯ ೬ ಪರ್ವತಾರೋಹಿಗಳು ಭಾಗವಹಿಸಲಿದ್ದಾರೆ.

****************

ಲೋಕಸಭೆಯಲ್ಲಿ ಇಂದು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ವಾಸ್ತವಿಕ ನಿಯಂತ್ರಣ ರೇಖೆಯಲ್ಲಿನ ಸಮಸ್ಯೆಗಳನ್ನು ಮತ್ತು ಅಮೆರಿಕ ಭಾರತದ ಮೇಲೆ ವಿಧಿಸಿರುವ ಪರಸ್ಪರ ಸುಂಕದ ಬಗ್ಗೆ ಪ್ರಸ್ತಾಪಿಸಿದರು. ಶೂನ್ಯ ವೇಳೆಯಲ್ಲಿ ಸಮಸ್ಯೆಗಳನ್ನು , ಪ್ರಸ್ತಾಪಿಸಿದ ರಾಹುಲ್ ಗಾಂಧಿ, ಯಥಾಸ್ಥಿತಿ ಕಾಯ್ದುಕೊಳ್ಳಬೇಕು ಮತ್ತು ಭಾರತವು ತನ್ನ ಭೂಮಿಯನ್ನು ಮರಳಿ ಪಡೆಯಬೇಕು ಎಂದು ಹೇಳಿದರು.

ಈ ನಿರ್ಧಾರದಿಂದ ಔಷಧೀಯ ಕೈಗಾರಿಕೆಗಳು ಹಾಗೂ ಕೃಷಿಯ ಮೇಲೆ ಪರಿಣಾಮ ಬೀರಲಿದ್ದು, ಅಮೆರಿಕದ ನಿರ್ಧಾರದ ಬಗ್ಗೆ ಸರ್ಕಾರ ತನ್ನ ನಡೆಯನ್ನು ಸ್ಪಷ್ಟಪಡಿಸುವಂತೆ ತಿಳಿಸಿದರು.

****************

ಬಿಹಾರದಲ್ಲಿ ಇಂದು ಸೂರ್ಯ ದೇವರ ಆರಾಧನೆಯಾದ ಶುಭ ಚೈತಿ ಛತ್ ಪೂಜೆಯ ಮೂರನೇ ದಿನವನ್ನು ಆಚರಿಸಲಾಯಿತು. ರಾಜ್ಯಾದಾದ್ಯಂತ ನದಿ ಮತ್ತು ಜಲಮೂಲಗಳ ವಿವಿಧ ದಡಗಳಲ್ಲಿ ಸ್ಥಾಪಿಸಲಾದ ಛತ್ ಘಾಟ್ ಗಳ ದಡದಲ್ಲಿ ಸೂರ್ಯಾಸ್ತದ ವೇಳೆ ಸೂರ್ಯನಿಗೆ ಅರ್ಘ್ಯ ಮತ್ತು ನೈವೇದ್ಯವನ್ನು ಅರ್ಪಿಸಲಾಯಿತು.

ನಾಲ್ಕು ದಿನಗಳ ಕಾಲ ನಡೆಯಲಿರುವ ಛತ್ ಪೂಜೆಯು ಮಂಗಳವಾರ ಆರಂಭಗೊಂಡಿದ್ದು, ನಾಳೆ ಮುಂಜಾನೆ ಉದಯಿಸುವ ಸೂರ್ಯನಿಗೆ ಎರಡನೇ ಅರ್ಘ್ಯ ಮತ್ತು ನೈವೇದ್ಯದೊಂದಿಗೆ ಕೊನೆಗೊಳ್ಳಲಿದೆ.

ಛತ್ ಪೂಜೆಯ ಹಿನ್ನಲೆ ರಾಜ್ಯಾದ್ಯಂತ ವ್ಯಾಪಕ ಭದ್ರತಾ ವ್ಯವಸ್ಥೆಗಳನ್ನು ಮಾಡಲಾಗಿದ್ದು, ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಮತ್ತು ಮುಖ್ಯಮಂತ್ರಿ ನಿತೀಶ್ ಕುಮಾರ್ ಜನರಿಗೆ ಶುಭಾಶಯ ತಿಳಿಸಿದ್ದಾರೆ.

****************

ಕೊಲ್ಕೊತ್ತಾದ ಈಡನ್ ಗಾರ್ಡನ್‌ನಲ್ಲಿ ನಡೆಯುತ್ತಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಐಪಿಎಲ್ ಟಿ-೨೦ ಪಂದ್ಯಾಟದಲ್ಲಿ ಇಂದು ಕೊಲ್ಕೊತ್ತಾ ನೈಟ್ ರೈಡರ್ಸ್ ಮತ್ತು ಸನ್ ರೈಸರ್ಸ್ ಹೈದರಬಾದ್ ತಂಡಗಳು ಮುಖಾಮುಖಿಯಾಗಿವೆ.

ಟಾಸ್ ಗೆದ್ದ ಸನ್ ರೈಸರ್ಸ್ ಹೈದರಬಾದ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

********ಮುಕ್ತಾಯ********